

# ಹಲ್ಲು ಹುಳುಕು; ಪರಿಹಾರ ಏನು?

■ ಡಾ. ಪ್ರೇಮಲತ ಬಿ.

ಹತ್ತು ವರ್ಷದ ಹರ್ಷಿತ್‌ಗೆ ನಿತ್ಯವೂ ಹಲ್ಲು ನೋವು. ಬೆಳಿಗ್ಗೆ ಎದ್ದು ಹಲ್ಲು ಉಜ್ಜಲು ಶುರು ಮಾಡುವಾಗಲೇ ಅಳು ಒತ್ತರಿಸಿಕೊಂಡು ಬರುತ್ತದೆ. ಈ ನೋವಿಗೆ ಕಾರಣ ಹಲ್ಲು ಹುಳುಕಿನಿಂದಾಗಿ ಬ್ರಷ್‌ನಲ್ಲಿ ಉಜ್ಜುವಾಗ ಅಸಾಧ್ಯ ನೋವು. ನೋವು ತಪ್ಪಿಸಿಕೊಳ್ಳಲು ಅನೇಕ ಸಲ ಹರ್ಷಿತ್ ಹಲ್ಲು ಉಜ್ಜುವುದನ್ನೇ ಬಿಟ್ಟು ಬಿಡುತ್ತಾನೆ. ಕೊನೆಗೆ ಆತನ ತಾಯಿ ದಂತವೈದ್ಯರ ಬಳಿ ಕರೆದೊಯ್ದು ಚಿಕಿತ್ಸೆ ಕೊಡಿಸಲೇ ಬೇಕಾಯಿತು.

ಅನೇಕ ಮಕ್ಕಳು (ದೊಡ್ಡವರು ಸಹ) ಎಷ್ಟೇ ಹಲ್ಲು ನೋವು ಬಂದರೂ ದಂತ ಚಿಕಿತ್ಸೆಗಾಗಿ ವೈದ್ಯರ ಬಳಿ ಹೋಗಲು ಹಿಂಜರಿಯುತ್ತಾರೆ. ಹೀಗೆ ಜನಸಾಮಾನ್ಯರ ನಡುವೆ ಹಲವರಿಗೆ ದಂತ ವೈದ್ಯರ ಬಳಿ ಹೋಗಲು ಹಲವು ಹಿಂಜರಿಕೆಗಳಿವೆ. ಇದು ಭಾರತದಲ್ಲಷ್ಟೇ ಅಲ್ಲದೆ ಪ್ರಪಂಚದ ಹಲವು ರಾಷ್ಟ್ರಗಳಲ್ಲಿನ ಜನರಲ್ಲಿಯೂ ಕಂಡುಬರುತ್ತವೆ.

ಈ ಹಿಂಜರಿಕೆಗೆ ಹಲವು ಸಹಜ ಕಾರಣಗಳಿವೆ. ಉದಾಹರಣೆಗೆ ದಂತಚಿಕಿತ್ಸೆ ದುಬಾರಿ ಎನ್ನುವುದು ಒಂದು ಕಾರಣ. ಇದು ಉಚಿತವಾಗಿ ಆರೋಗ್ಯ ಭಾಗ್ಯ ನೀಡುವ ಹಲವು ದೇಶಗಳಲ್ಲಿಯೂ ನಿಜ. ಏಕೆಂದರೆ ಹೃದಯ ಚಿಕಿತ್ಸೆಯನ್ನು ಬೇಕಾದರೂ ಉಚಿತವಾಗಿ ಭರಿಸಬಲ್ಲ ಹಲವು ಶ್ರೀಮಂತ ದೇಶಗಳು ಕೂಡ ದಂತ ಚಿಕಿತ್ಸೆಯನ್ನು ಎಲ್ಲರಿಗೂ ಉಚಿತವಾಗಿ ನೀಡುವುದಿಲ್ಲ. ಇದಕ್ಕೆ ಕಾರಣ ಹೃದಯದ ಕಾಯಿಲೆಗಳು ಎಲ್ಲರನ್ನೂ, ಎಲ್ಲ ವಯಸ್ಸಿನವರನ್ನೂ ಕಾಡುವುದು ಕಡಿಮೆ. ಆದರೆ ದಂತ ಸಮಸ್ಯೆಗಳು ಬಹುಶಃ ಪ್ರತಿ ವ್ಯಕ್ತಿಯನ್ನೂ ಕಾಡುವುದು ಒಂದು ಕಾರಣವಾದರೆ, ಬಾಯಿಯ ಆರೋಗ್ಯದ ವಿಚಾರದಲ್ಲಿ ಅತಿ ಹೆಚ್ಚಿನ ತೊಂದರೆಯೆಂದರೆ ಹಲ್ಲನ್ನು ಕಳೆದುಕೊಳ್ಳುವುದರ ವಿನಾ ಜೀವಕ್ಕೆ ಅಪಾಯವಿಲ್ಲದಿರುವುದು ಇನ್ನೊಂದು ಕಾರಣ.

## ಹಿಂಜರಿಕೆ ಬೇಡ

ಹಲವರು ದಂತವೈದ್ಯರಲ್ಲಿ ಹಾಗೆಂದು ಬಾಯಿ ಬಿಟ್ಟೇ ಹೇಳುತ್ತಾರೆ. ನೋವಾಗುವುದಿಲ್ಲ ಅಂತ ಗೊತ್ತಿದ್ದರೂ ಬಾಲ್ಯದ ಹಳೆಯ ಕಹಿ ನೆನಪುಗಳು ಇವರ ಆತಂಕಕ್ಕೆ ಕಾರಣವಾಗಿರುತ್ತದೆ. ಹಾಗಾಗಿ ಹಲ್ಲು